# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 02.04.2011**

ನಗರದ ಹೃದಯ ಭಾಗದಲ್ಲಿರುವ ಹಲಸೂರು ಕೆರೆಯ ಸಮಗ್ರ ಅಭಿವೃದ್ಧಿಗೆ ಒಂದು ಕೋಟಿ ರೂ. ವೆಚ್ಚದಲ್ಲಿ ಕ್ರಿಯಾ ಯೋಜನೆ ಸಿದ್ದಪಡಿಸಲು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ಇಂದು ಆದೇಶ ನೀಡಿದರು.

ಪಾಲಿಕೆ ಆಯುಕ್ತರು ಇಂದು ಬೆಳಿಗ್ಗೆ 6.00 ಗಂಟೆಗೆ ಪೂರ್ವ ವಲಯದಲ್ಲಿ ತಪಾಸಣೆ ಕೈಗೊಂಡು ಹಲಸೂರು ಕೆರೆಯ ಸುತ್ತಮುತ್ತಲು ನೈರ್ಮಲ್ಯ, ಸ್ವಚ್ಛತೆ, ಶೌಚಾಲಯ ವ್ಯವಸ್ಥೆ, ಮುಂತಾದ ವಿಷಯಗಳನ್ನು ಪರಿಶೀಲಿಸಿ, ಬೆಳಗಿನ ಜಾವ ವಿಹಾರಕ್ಕೆ ಆಗಮಿಸಿದ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಿದ ಆಯುಕ್ತರು ಕೆರೆಗೆ ಸೇರುತ್ತಿರುವ ಕೊಳಚೆ ನೀರು ತಡೆಗಟ್ಟಲು, ಕೆರೆಯಲ್ಲಿ ಮತ್ತು ಸುತ್ತಲು ಬೆಳೆದಿರುವ ಹುಲ್ಲು ಮತ್ತು ಪಾರ್ಥೇನಿಯಂ ಸ್ವಚ್ಛಗೊಳಿಸಲು, ಶೌಚಾಲಯ ದುರಸ್ಥಿ, ಭದ್ರತೆ, ಪಾದಚಾರಿ ಮಾರ್ಗ ದುರಸ್ಥಿ ಹಾಗೂ ಕೆರೆಯ ನೀರಿನಿಂದ ಉತ್ಪತ್ತಿಯಾಗುವ ದುರ್ವಾಸನೆಯನ್ನು ನಿವಾರಿಸಲು ಜೈವಿಕ ದ್ರಾವಣವನ್ನು ಬಳಸುವಂತೆ ಮತ್ತು ಒಟ್ಟಾರೆ ವಿಹಾರಕ್ಕಾಗಿ ಆಗಮಿಸುವ ಸಾರ್ವಜನಿಕರಿಗೆ ಆಹ್ಲಾದಕ ವಾತಾವರಣ ನಿರ್ಮಿಸಲು ಎಲ್ಲಾ ಅಂಶಗಳನ್ನೊಳಗೊಂಡ ಸಮಗ್ರ ಕ್ರಿಯಾ ಯೋಜನೆ ತಯಾರಿಸಲು ಮುಖ್ಯ ಅಭಿಯಂತರರು (ಯೋಜನೆ) ರವರಿಗೆ ಆದೇಶ ನೀಡಿದರು. 100 ಎಕರೆ ಜಮೀನಿನಲ್ಲಿ ಹಬ್ಬಿಕೊಂಡಿರುವ ಈ ಕೆರೆ ನಗರದ ಹೃದಯ ಭಾಗದಲ್ಲಿದ್ದು, ಇದನ್ನು ಅಭಿವೃದ್ಧಿ ಪಡಿಸುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿದೆ. ಕೆರೆಯ ಕಲ್ಯಾಣಿಯಲ್ಲಿರುವ ನೀರನ್ನು ಕೇವಲ ಗಣೇಶ ಉತ್ಸವ ಮತ್ತು ದುರ್ಗಾ ಪೂಜೆ ಸಂದರ್ಭದಲ್ಲಿ ಸ್ವಚ್ಛಗೊಳಿಸದೆ ನಿರಂತರವಾಗಿ ಸ್ವಚ್ಛಗೊಳಿಸಿ ಉತ್ತಮ ರೀತಿಯಲ್ಲಿ ನಿರ್ವಹಿಸಲು ಸೂಚಿಸಿದರು.

ಈ ಕೆರೆಯ ಉತ್ತಮ ರೀತಿ ನಿರ್ವಹಣೆಗೆ ಪಾಲಿಕೆಯಿಂದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಅದರ ಜೊತೆಗೆ ಸಾರ್ವಜನಿಕರ ಸಹಕಾರ ಅಗತ್ಯವೆಂದು ಆಯುಕ್ತರು ತಿಳಿಸಿದ ಹಿನ್ನೆಲೆಯಲ್ಲಿ ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಪುರುಷೋತ್ತಮ (9342822252) ರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಸಂಘದ ವತಿಯಿಂದ ಪಾಲಿಕೆಯೊಂದಿಗೆ ಸಹಕಾರ ನೀಡಿ, ಕೆಲವು ಜವಾಬ್ದಾರಿಗಳನ್ನು ನಿರ್ವಹಿಸುವುದಾಗಿ ತಿಳಿಸಿದರು.

ತಪಾಸಣೆ ಸಂದರ್ಭದಲ್ಲಿ ಕೆರೆಯಲ್ಲಿ ಅನಧಿಕೃತವಾಗಿ ಮೀನು ಹಿಡಿಯುತ್ತಿರುವುದನ್ನು ಗಮನಿಸಿದ ಆಯುಕ್ತರು, ಕೂಡಲೇ ಅಲ್ಲಿದ್ದ ಮೀನುಗಾರರನ್ನು ಮತ್ತು ಅವರ ವಾಹನವನ್ನು ವಶಪಡಿಸಿಕೊಂಡು ಬಿ.ಎಂ.ಟಿ.ಎಫ್.ಗೆ ಒಪ್ಪಿಸಲು ಸೂಚಿಸಿದರು. ಈ ಕೆರೆಯಲ್ಲಿ ಇನ್ನುಮುಂದೆ ಮೀನುಗಾರಿಕೆಗೆ ಟೆಂಡರ್ ಮುಖಾಂತರ ಅವಕಾಶ ಕಲ್ಪಿಸಲಾಗುವುದು. ಅದರಿಂದ ಬಂದ ಆದಾಯವನ್ನು ಕೆರೆಯ ನಿರ್ವಹಣೆಗೆ ಉಪಯೋಗಿಸಲಾಗುವುದೆಂದು ತಿಳಿಸಿದರು.

ಆಸ್‌ಬಾನ್ ರಸ್ತೆಯಲ್ಲಿ ನಾಯಿ ಮತ್ತು ದನಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಕೂಡಲೇ ನಿವಾರಿಸಲು ಸಾರ್ವಜನಿಕರು ಕೋರಿದ ಮೇರೆಗೆ ಸ್ಥಳದಲ್ಲಿ ಹಾಜರಿದ್ದ ಪಶುಪಾಲನೆ ಇಲಾಖೆಯ ಸಿಬ್ಬಂದಿಯವರನ್ನು ಕಳುಹಿಸಿ, ಕ್ರಮ ಕೈಗೊಳ್ಳಲಾಯಿತು.

ತದನಂತರ ಐತಿಹಾಸಿಕ ಹಿನ್ನೆಲೆಯುಳ್ಳ ಕೋಲ್ಸ್ ಪಾರ್ಕ್‌ಗೆ ಭೇಟಿ ನೀಡಿದ ಆಯುಕ್ತರು, ಉದ್ಯಾನವನದ ನಿರ್ವಹಣೆಯನ್ನು ಪರಿಶೀಲಿಸಿದರು. ಉದ್ಯಾನವನದಲ್ಲಿ ನಾಯಿಗಳ ಹಾವಳಿ, ವಿದ್ಯುತ್ ದೀಪದ ವ್ಯವಸ್ಥೆ, ಪಾದಚಾರಿ ಮಾರ್ಗದ ನಿರ್ವಹಣೆ ಮತ್ತು ಉದ್ಯಾನವನದಲ್ಲಿ ಕೆಲವು ಕಿಡಿಗೇಡಿಗಳು ಮಾದಕವಸ್ತು ಸೇವನೆ ಚಟುವಟಿಕೆಗಳು ನಡೆಯುತ್ತಿವೆಂದು ಸಾರ್ವಜನಿಕರು ಆಯುಕ್ತರಿಗೆ ದೂರು ನೀಡಿದರು. ಆಯುಕ್ತರು ಸ್ಥಳದಲ್ಲೇ ಹಾಜರಿದ್ದ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಒಂದು ವಾರದ ಒಳಗಾಗಿ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಿ, ಕ್ರಮ ಕೈಗೊಳ್ಳಲು ಸೂಚಿಸಿದರು. ಮತ್ತು ಈ ಉದ್ಯಾನವನದಲ್ಲಿ ಸಾಕಷ್ಟು ತೆರೆದ ಸ್ಥಳಾವಕಾಶ ಇರುವುದರಿಂದ ಇನ್ನೂ ಹೆಚ್ಚಿನ ಸಸಿಗಳನ್ನು ನೆಡಲು ಮತ್ತು ಸುಮಾರು 5 ಕಡೆ ಮಳೆ ನೀರಿನ ಕೊಯ್ಲು ಘಟಕಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.

ತದನಂತರ ಆಯುಕ್ತರು ಕಾಮರಾಜ ರಸ್ತೆ, ಇಂದಿರಾನಗರದ ಕೆಲವು ಭಾಗಗಳು, ಅಮರಜ್ಯೋತಿ ಬಡಾವಣೆ, ಶಾಂತಿನಗರ, ಜಯನಗರ, ಭೈರಸಂದ್ರ, ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನಗಳಿಗೆ ಭೇಟಿ ನೀಡಿ, ಉದ್ಯಾನವನ, ಆಟದ ಮೈದಾನ, ರಸ್ತೆ ಬದಿ ಮೋರಿ ಸೇರಿದಂತೆ ನಗರಾದ್ಯಂತ ಈ ಮಳೆಗಾಲದ ಮುಂಚಿತವಾಗಿ ಸುಮಾರು 5 ಲಕ್ಷ ಮಳೆ ನೀರು ಇಂಗು ಗುಂಡಿಗಳನ್ನು ತೋಡಿಸಲು ವಲಯ ಅಭಿಯಂತರರುಗಳಿಗೆ ಸೂಚನೆ ನೀಡಿದರು. ಇದರಿಂದ ಮಳೆ ನೀರು ಸಂಗ್ರಹಣೆ, ಅಂತರ್ಜಲದ ಮಟ್ಟ ಹೆಚ್ಚುವುದಲ್ಲದೆ ಮಳೆಗಾಲದಲ್ಲಿ ಉಂಟಾಗುವ ಪ್ರವಾಹವನ್ನು ಕೂಡ ನಿಯಂತ್ರಿಸಬಹುದೆಂದು ತಿಳಿಸಿದರು.

ತಪಾಸಣೆ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶ್ರೀ ಶಿವಕುಮಾರ್, ಶ್ರೀಮತಿ ಗೀತಾ ಶ್ರೀನಿವಾಸ ರೆಡ್ಡಿ, ಶ್ರೀಮತಿ ಸರಳ, ಶ್ರೀ ಉದಯಕುಮಾರ್, ಶ್ರೀ ಅಬ್ದುಲ್ ರಖೀಬ್ ಜಾಕೀರ್, ಶ್ರೀ ಸೋಮಶೇಖರ್ ಮತ್ತು ಶ್ರೀ ಎನ್. ನಾಗರಾಜ್, ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***<u>ಪತ್ರಿಕಾ ಪ್ರಕಟಣೆ</u>*** **ದಿನಾಂಕ: 02.04.2011**

ರಾಷ್ಟ್ರೀಯ ತಂಬಾಕು ನಿಷೇಧ ಕಾಯ್ದೆ ಅಡಿಯಲ್ಲಿ ಹಾಗೂ ಪಾಲಿಕೆ ಕೌನ್ಸಿಲ್ ಸಭೆಯ ನಿರ್ಣಯದ ಹಿನ್ನೆಲೆಯಲ್ಲಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ನಗರದಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಹುಕ್ಕಾ ಸೇದುವನ್ನು ನಿಷೇಧಿಸಲು ಪಾಲಿಕೆ ಆರೋಗ್ಯ ಇಲಾಖೆಯ ವತಿಯಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯನ್ನು ಮುಂದುವರೆಸಿದ್ದು, ದಿನಾಂಕ: 02.04.2011 ರಂದು ಆರೋಗ್ಯಾಧಿಕಾರಿ (ದಕ್ಷಿಣ) ವಲಯದ ಚಿಕ್ಕಪೇಟೆ ಹಾಗೂ ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ 3ನೇ ಬ್ಲಾಕ್ ಜಯನಗರದಲ್ಲಿ ಬ್ಲಾಕ್ ಮಗ್ಗ್, 4ನೇ ಬ್ಲಾಕ್ ಜಯನಗರದಲ್ಲಿ ಅಡ್ಡಾ ಕೆಫೆ, ಜೆ.ಪಿ. ನಗರ 100 ಅಡಿ ರಸ್ತೆಯಲ್ಲಿ ಕಪ್ಪಾ ಕೆಫೆ, 9ನೇ ಬ್ಲಾಕ್ ಜಯನಗರ ಕಾಫೀ ಹೌಸ್, ಕೆಂಗಲ್ ಹನುಮಂತಯ್ಯ ರಸ್ತೆಯ ವಸಂತ ಕಲರ್ ಲ್ಯಾಬ್ ಆವರಣದಲ್ಲಿರುವ ಹೋಟೆಲ್‌ಗಳ ಮೇಲೆ ದಾಳಿ ನಡೆಸಿ ಒಟ್ಟು 45 ಹುಕ್ಕಾ ಪರಿಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಮುಂದೆಯೂ ಈ ರೀತಿ ಅನಧಿಕೃತವಾಗಿ ಹುಕ್ಕಾ ಕೇಂದ್ರ ನಡೆಸುತ್ತಿರುವ ಹೋಟೆಲ್ ಉದ್ದಿಮೆಗಳ ಮೇಲೆ ದಾಳಿ ನಡೆಸಿ, ಅಂತಹ ಹೋಟೆಲ್‌ಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**